ಪ್ರಮಾಣ ವಚನ ಬೋಧಿಸಿದ ದಿನಾಂಕಃ **29.06.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಎಸ್.ಎಂ. ವಕೀಲರಿಂದ**

ನಾನು ಆಂಜನಪ್ಪ ಮತ್ತು **1** ರಿಂದ **4** ನೇ ಪ್ರತಿವಾದಿಯ ಕಡೆಯಿಂದ ಕರಾರುಪತ್ರ ಮಾಡಿಸಿಕೊಂಡಿದ್ದೆನು ಆದರೆ ಅವರು ಪತ್ರ ಬರೆದು ಕೊಡಲಿಲ್ಲ ಹಾಗಾಗಿ ಈ ಕೇಸನ್ನು ಹಾಕಿದ್ದೆನು. ಕರಾರುಪತ್ರ ಬರೆದುಕೊಡುವ ಸಮಯದಲ್ಲಿ ಲಕ್ಷ್ಮಮ್ಮ ಮತ್ತು ಪುಟ್ಟಮ್ಮನವರಿಗೆ ಹಣ ಕೊಡಬೇಕೆಂದು ಆಂಜನಪ್ಪ ಮತ್ತು ಅವರ ಹೆಂಡತಿ ಮಕ್ಕಳು ನನ್ನ ಹತ್ತಿರ ಹಣ ಪಡೆದುಕೊಂಡು ಹೋಗಿದ್ದರು. ನಾನು ಸದರಿ ಲಕ್ಷ್ಮಮ್ಮ ಮತ್ತು ಪುಟ್ಟಮ್ಮನವರಿಗೆ ಖುದ್ದಾಗಿ ಹಣ ಕೊಟ್ಟಿಲ್ಲ. **5** ಮತ್ತು **6** ನೇ ಪ್ರತಿವಾದಿಯರು ನನ್ನ ಹತ್ತಿರ ಯಾವುದೇ ಕ್ರಯದ ವ್ಯವಹಾರ ಮಾಡಿಲ್ಲ. ಯಾವ ಕಾರಣಕ್ಕಾಗಿ ಪ್ರತಿವಾದಿಯರು ಕರಾರುಪತ್ರ ಬರೆದುಕೊಟ್ಟಿದ್ದಾರೆಂದರೆ ಸಾಕ್ಷಿಯು ಸಾಲ ತೀರಿಸಲು ಮತ್ತು ಹೆಣ್ಣು ಮಕ್ಕಳಿಗೆ ಹಣ ಕೊಡಲು ಕರಾರುಪತ್ರ ಬರೆದುಕೊಟ್ಟಿದ್ದರು ಎಂದು ಹೇಳುತ್ತಾರೆ.

ಸರ್ವೆ ನಂ.**48/2** ಮತ್ತು ಹೊಸ ಸರ್ವೆ ನಂ.**48/4** ರ ಜಮೀನಿಗೆ ಸಂಬಂಧಿಸಿದಂತೆ ಕರಾರುಪತ್ರವಾಗಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಪತ್ರಗಳನ್ನು ಪರಿಶೀಲನೆ ಮಾಡಿದ್ದೀರಾ? ಎಂದರೆ ಹೌದು. ನಾನು ದಾವಾ ಆಸ್ತಿಗೆ ಸಂಬಂಧಿಸಿ ಪಾರಿಕತ್ ಪತ್ರ ಮತ್ತು ಪಹಣಿಗಳನ್ನು ನೋಡಿರುತ್ತೇನೆ. ಈ ರೀತಿ ಪಾರಿಕತ್ತಿನ ಮೂಲಕ ಆಂಜನಪ್ಪನಿಗೆ ಆಸ್ತಿ ಬಂದಿತ್ತು ಎಂದು ದಾವೆಯಲ್ಲಿ ಬರೆಸಿದ್ದೀರಾ? ಎಂದರೆ ಹೌದು. ಸದರಿ ಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ? ಎಂದರೆ ಹೌದು. ನಾನು ಯಾವುದೇ ಪಾರಿಕತ್ತನ್ನು ನ್ಯಾಯಲಯಕ್ಕೆ ನನ್ನ ಮೂಲಕ ಅದನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.**7**

ಪಹಣಿಯ ಕಲಂ ನಂ.**11** ರಲ್ಲಿ ಅಸಲು ದಾವೆ ಸಂಖ್ಯೆ:**42/2012** ರಂತೆ ತಾತ್ಕಾಲಿಕ ಪ್ರತಿಬಂಧಾಜ್ಞೆ ಇದೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕರಾರುಪತ್ರದ ಸಮಯದಲ್ಲಿ ಪ್ರತಿವಾದಿಗಳು ಸದರಿ ಕೇಸಿನ ಬಗ್ಗೆ ನಮಗೆ ತಿಳಿಸಿರಲಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯನ್ನು ಆಂಜನಪ್ಪನವರ ಅತ್ತಿಗೆಯವರು ಸಲ್ಲಿಸಿದ್ದಾರೆಂದು ನಮಗೆ ಹೇಳಿದ್ದರು. ಅವರು ಪೂರ್ತಿ **5** ಎಕರೆ **14** ಗುಂಟೆಗೆ ದಾವೆ ಹಾಕಿದ್ದರು. ಸದರಿ ದಾವೆಯನ್ನು ಭಾಗ ಕೇಳಿ ಹಾಕಿದ್ದರು. ಸದರಿ ದಾವೆಯು ದಿನಾಂಕ:**08.09.2014** ರಲ್ಲಿ ವಜಾ ಆಗಿರುತ್ತದೆ. ಕರಾರುಪತ್ರದ ಸಮಯದಲ್ಲಿ ಆಂಜನಪ್ಪನವರ ವಂಶವೃಕ್ಷವನ್ನು ಪಡೆದುಕೊಂಡಿದ್ದೀರಾ? ಎಂದರೆ ಹೌದು. ಸದರಿ ವಂಶವೃಕ್ಷವನ್ನು ಈ ಕೇಸಿನಲ್ಲಿ ಹಾಜರುಪಡಿಸಿದ್ದೀರಾ? ಎಂದರೆ ಹೌದು.

ಹಳೆ ಸರ್ವೆ ನಂ.**48/2** ರ ಆಸ್ತಿಯು ಪೋಡಿಯಾಗಿ ಹೊಸ ಸರ್ವೆ ನಂ.**48/4** ಆಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ? ಎಂದರೆ ಹೌದು. ನಾನು ಈ ರೀತಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆಂಜನಪ್ಪನವರ ಸಹೋದರಿಯರಾದ **5** ಮತ್ತು **6** ನೇ ಪ್ರತಿವಾದಿಯರು ಅವರ ಕುಟುಂಬದಲ್ಲಿ ವಿಭಾಗ ಸರಿಯಾಗಿಲ್ಲ ಎಂದು ಅಸಲು ದಾವೆ ಸಂಖ್ಯೆ:**271/2007** ರಲ್ಲಿ ದಾವೆ ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ಕೇಸಿನ ಆಸ್ತಿಯನ್ನು ಸೇರಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ **5** ಮತ್ತು **6** ನೇ ಪ್ರತಿವಾದಿಯರಿಗೆ ಭಾಗ ಇದೆ ಎಂದು ತೀರ್ಪು ನೀಡಿ ಡಿಕ್ರಿ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಡಿಕ್ರಿ ಆಧಾರ ಮೇಲೆ **5** ಮತ್ತು **6** ನೇ ಪ್ರತಿವಾದಿಯರು ಎಫ್.ಡಿ.ಪಿ. **7/2017** ರಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. **2011** ರಲ್ಲಿ ಕರಾರುಪತ್ರವಾಗಿದೆ ಎಂದು ಹೇಳುವ ಸಮಯದಲ್ಲಿ ಪ್ರತಿವಾದಿಯರ ಕುಟುಂಬದವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.